**ದಿನಾಂಕ ಃ 14-10-2022 ರಂದು ಸಾಕ್ಷಿಗೆ ಪ್ರಮಾಣವಚನ ಬೋದಿಸಲಾಯಿತು**
**-----------------------------------------------------**

**ಪಾಟೀ ಸವಾಲು ಶ್ರೀ.ಕೆ.ಕೆ.ವಿ. ವಕೀಲರಿಂದ:-**

ನಾನು ಹಟ್ಟಿ ಗ್ರಾಮದವನು. 2002 ರಿಂದ ಲಿಂಗಸಗೂರಿನಲ್ಲಿ ವಾಸ ಇರುತ್ತೇನೆ. ಬಸ್ ಸ್ಟಾಂಡ ಬಳಿ ಇರುತ್ತೇನೆ. ವಾದಿಯ ಗಂಡ ನನ್ನ ಪರಿಚಯಸ್ಥ. ವಾದಿ ಮತ್ತು ಪ್ರತಿವಾದಿಯರಿಗೆ ಪ್ಲಾಟನ್ನು ನೀಡಿರುವ ಬಗ್ಗೆ ನನಗೆ ವಾದಿಯ ಗಂಡನಿಂದ ಗೊತ್ತಾಗಿರುತ್ತದೆ. ನನ್ನ ಮುಖ್ಯ ವಿಚಾರಣೆಯ ಮಾಹಿತಿಯನ್ನು ವಾದಿಯ ಗಂಡನಿಂದ ಪಡೆದುಕೊಂಡೇ ನೀಡಿದ್ದೇನೆ. ನನಗೆ ವಾದಿಯ ಪ್ಲಾಟಿನ ದಾಖಲಾತಿಯ ಬಗ್ಗೆ ಮಾತ್ರ ಗೊತ್ತಿರುತ್ತದೆ ಪ್ರತಿವಾದಿಯರ ಪ್ಲಾಟಿನ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದಿಯ ಗಂಡ ಪ್ರತಿವಾದಿಯರಿಗೆ 2 ಪ್ಲಾಟುಗಳನ್ನು ನೀಡಿರುವುದಿಲ್ಲ ಒಂದೇ ಪ್ಲಾಟನ್ನು ನೀಡಿದ್ದು ಎಂಬ ವಿಷಯವು ಅವರಿಂದ ತಿಳಿದುಕೊಂಡು ಮತ್ತು ನಾನು ನೋಡಿ ಹೇಳುತ್ತಿದ್ದೇನೆ. ಪ್ರತಿವಾದಿಯರಿಗೆ ಆಸ್ತಿಯು ಯಾವಾಗ ನೀಡಿರುತ್ತಾರೆ ಅವರು ಯಾವಾಗಿನಿಂದ ಕಬ್ಜೆಯಲ್ಲಿರುತ್ತಾರೆ ನನಗೆ ಗೊತ್ತಿಲ್ಲ.

2. ವಾದಿಯ ಗಂಡನಿಂದ ತಿಳಿದುಕೊಂಡೇ ಪ್ರತಿವಾದಿಗೆ 30X40 ಪ್ಲಾಟುನ್ನು ನೀಡಿದ್ದು 40X60 ಪ್ಲಾಟನ್ನು ನೀಡಿರುವುದಿಲ್ಲ ಎಂದು ನುಡಿದಿರುತ್ತೇನೆ. ವಾದಿಗೆ ಆಸ್ತಿಯನಲ್ಲು ಪರಸಬೆಯವರು ನೀಡಿರುವುದು ಎಂದು ಮಾತ್ರ ಗೊತ್ತಿರುತ್ತದೆ ನಿಖರವಾಗಿ ಯಾರು ನೀಡಿರುತ್ತಾರೆ ನನಗೆ ಹೇಳಲು ಬರುವುದಿಲ್ಲ. ಅವರಿಗೆ ಯಾವ ವರ್ಷದಲ್ಲಿ ನೀಡಿರುತ್ತಾರೆ ಯಾವ ದಾಖಲಾತಿಗಳನ್ನು ಪುರಸಬೆಯಿಂದ ಕೊಟ್ಟಿರುತ್ತಾರೆ ನನಗೆ ಗೊತ್ತಿಲ್ಲ. ನನಗೆ ಪ್ಲಾಟಗಳನ್ನು ನೀಡಿರುವ ಬಗ್ಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ವಾದಿಯ ಗಂಡನ ಹೆಳಿಕೆಯ ಮೇರೆಗೆ ಸಾಕ್ಷಿ ಹೇಳುತ್ತಿದ್ದೇನೆ. ವಾದಿಯ ಗಂಡನ ಮಾತನ್ನು ಕಟ್ಟಿಕೊಂಡು ಸುಳ್ಳ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ.ಕೇ. ಸರಿ ಇದೆ
**ಸಹಿ**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು.,ಲಿಂಗಸುಗೂರು